## AUGUST 28,2024
## ALL INDIA RADIO- DHARWAD
## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಅಪಘಾತ ವಲಯಗಳ ಸಮೀಪದಲ್ಲೇ,** ಟ್ರಾಮಾ ಕೇರ್ ಸೆಂಟರ್‌ಗಳನ್ನು ತೆರೆಯಲು ಕ್ರಮ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ರಾಜ್ಯದ ಮಹಿಳಾ ವೈದ್ಯರ ಸುರಕ್ಷತೆ ಖಾತ್ರಿಗೆ,** ವ್ಯಾಪಕ ಮುಂಜಾಗ್ರತಾ ಕ್ರಮ – ಶರಣಪ್ರಕಾಶ ಪಾಟೀಲ.
- **ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ 40 ಕೆರೆಗಳಲ್ಲಿ,** ತೇಲುವ ಸೌರ ಫಲಕ ಅಳವಡಿಸಲು, ಅಧ್ಯಯನ – ಎನ್.ಎಸ್.ಬೋಸರಾಜು.

- **ಅಮೆರಿಕದ ರಿಚ್ಮಂಡ್‌ನಲ್ಲಿ,** ಇದೇ 30 ರಿಂದ ಮೂರು ದಿನಗಳ, 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಅಪಘಾತ ವಲಯಗಳ ಸಮೀಪದಲ್ಲೇ,** ಟ್ರಾಮಾ ಕೇರ್ ಸೆಂಟರ್‌ಗಳನ್ನು ತೆರೆಯಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು, ಮಾತನಾಡಿದರು.

ಗಾಯಾಳುಗಳ ಜೀವ ಉಳಿಸಲು, 'ಗೋಲ್ಡನ್ ಅವರ್' ಬಹಳ ಮುಖ್ಯ. ಆರೋಗ್ಯ ಖಾತೆ ಸಚಿವ, ದಿನೇಶ್ ಗುಂಡೂರಾವ್ ಅವರ ಪ್ರಸ್ತಾಪವನ್ನು ಅನುಮೋದಿಸಿ, ಹಣ ಬಿಡುಗಡೆ ಮಾಡಿದ್ದಾಗಿ, ಮುಖ್ಯಮಂತ್ರಿ ತಿಳಿಸಿದರು.

ಜಯದೇವ ಆಸ್ಪತ್ರೆ ನಿರ್ದೇಶಕರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಮುಖ್ಯಮಂತ್ರಿ, ಇನ್ನು ಮುಂದೆ ದಿನದ 24 ಗಂಟೆ ಜಯದೇವದಲ್ಲಿ ಎಲ್ಲ ರೀತಿಯ ಆರೋಗ್ಯ ಸೇವೆ ಒದಗಿಸಬೇಕು. ಅದಕ್ಕಾಗಿ, ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ, ಅವರು ಸೂಚಿಸಿದರು.

ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ, ತಾವು ಬಜೆಟ್ ನಲ್ಲಿ ಘೋಷಿಸಿರುವ ಎಲ್ಲ ಯೋಜನೆಗಳನ್ನು ಜವಾಬ್ದಾರಿಯಿಂದ ಜಾರಿ ಮಾಡುವಂತೆ, ಸಿದ್ದರಾಮಯ್ಯ ಸೂಚಿಸಿದರು.

<><><>

**ರಾಜ್ಯದ ವೈದ್ಯಕೀಯ ಸಂಸ್ಥೆಗಳಲ್ಲಿ,** ಮಹಿಳಾ ವೈದ್ಯರ ಸುರಕ್ಷತೆ ಕುರಿತು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ, ಡಾಕರ್ ಶರಣಪ್ರಕಾಶ ಪಾಟೀಲ ನೇತೃತ್ವದಲ್ಲಿ, ಬೆಂಗಳೂರಿನಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು.

ಸಭೆಯಲ್ಲಿ ಪಾಲ್ಗೊಂಡಿದ್ದ, ಹಿರಿಯ ಮಹಿಳಾ ವೈದ್ಯರು, ಕೆಲಸದ ಸ್ಥಳದಲ್ಲಿ ತಾವು ಎದುರಿಸುತ್ತಿರುವ ಹಲವು ಸಮಸ್ಯೆಗಳ ಕುರಿತು, ಈ ವೇಳೆ ಪ್ರಸ್ತಾಪಿಸಿದರು.

ಬಳಿಕ ಸಚಿವರು, ರಾಜ್ಯದ ಎಲ್ಲ ವೈದ್ಯಕೀಯ ಸಂಸ್ಥೆ, ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರು ಮತ್ತು ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು, ಪ್ರತ್ಯೇಕ ಸಭೆ ನಡೆಸಿ, ಸಮಗ್ರ ಮಾಹಿತಿ ಕಲೆ ಹಾಕುವಂತೆ ಎಲ್ಲ, ವೈದ್ಯಾಧಿಕಾರಿ ಹಾಗೂ ಸಂಸ್ಥೆಯ ಮುಖ್ಯಸ್ಥರಿಗೆ ಸೂಚಿಸಿದ್ದಾಗಿ, ತಿಳಿಸಿದರು.

<><><>

**ಕಳೆದ 25ನೇ ತಾರೀಖಿನಿಂದ, ಸೆಪ್ಟೆಂಬರ್ 8ರ ವರೆಗೆ** ನೇತ್ರದಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಆಯೋಜಿಸಲಾಗಿದೆ ಎಂದು, ಮೇರುನಟ ಡಾಕ್ಟರ್ ರಾಜಕುಮಾರ ಆಯ್ ಬ್ಯಾಂಕ್ ನಿರ್ದೇಶಕ ಡಾಕ್ಟರ್ ಯತೀಶ ತಿಳಿಸಿದ್ದಾರೆ.

39ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವ್ಯಕ್ತಿಯ ಮರಣದ ನಂತರ, ಅವರ ಕುಟುಂಬದ ಸದಸ್ಯರು, ಮೃತ ವ್ಯಕ್ತಿಯ ಕಣ್ಣುಗಳನ್ನು ದಾನ ಮಾಡುವುದರಿಂದ, ನಾಲ್ವರು ಅಂಧರಿಗೆ ಅನುಕೂಲವಾಗಲಿದೆ ಎಂದು, ಡಾಕ್ಟರ್ ಯತೀಶ್ ತಿಳಿಸಿದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ, ನೇತ್ರದಾನ ಅರಿವು ಕಾರ್ಯಕ್ರಮ ಉದ್ಘಾಟಿಸಿದರು.

<><><>

**ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ** – ಟ್ರಿಪಲ್ ಐ.ಟಿ.ಯಲ್ಲಿ 'ಸೆಂಟರ್ ಫಾರ್ ಕ್ವಾಂಟಮ್ ರಿಸರ್ಚ್' ಪ್ರಾರಂಭಿಸಲು, ಅಗತ್ಯ ಅನುದಾನ ಹಾಗೂ ಅನುಮತಿ ಕೋರಿ, ನಿರ್ದೇಶಕ ಪ್ರೊಫೆಸರ್ ಮಹದೇವ ಪ್ರಸನ್ನ ನೇತೃತ್ವದ ತಂಡ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು ಅವರಿಗೆ, ಬೆಂಗಳೂರಿನಲ್ಲಿ ಮನವಿ ಸಲ್ಲಿಸಿದೆ.

ಸಚಿವರು ಪ್ರಶಂಸೆ ವ್ಯಕ್ತಪಡಿಸಿ, ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ, ನಿಯೋಗಕ್ಕೆ ಭರವಸೆ ನೀಡಿದರು.

ಸೆಂಟರ್ ಫಾರ್ ಕ್ವಾಂಟಮ್ ರಿಸರ್ಚ್ ಕಾರ್ಯಾರಂಭಿಸುವುದರಿಂದ, ಕರ್ನಾಟಕದಲ್ಲಿ ಪ್ರಥಮ ಸಂಶೋಧನಾ ಸಂಸ್ಥೆ ಎಂಬ ಹೆಗ್ಗಳಿಕೆಗೆ, ಟ್ರಿಪಲ್ ಐಟಿ ಪಾತ್ರವಾಗಲಿದೆ ಎಂದು, ಪ್ರೊಫೆಸರ್ ಮಹದೇವ ಪ್ರಸನ್ನ ತಿಳಿಸಿದರು.

<><><>

**ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ** ಪ್ರಶಸ್ತಿಗೆ, ರಾಜ್ಯದ ನಾಲ್ವರು ಶಿಕ್ಷಕರು ಭಾಜನರಾಗಿದ್ದಾರೆ.

ಹುಣಸೂರಿನ ಬಾಲಕಿಯರ ಸರ್ಕಾರಿ ಪಿ.ಯು. ಕಾಲೇಜಿನ ಉಪನ್ಯಾಸಕ ಎಚ್. ಎನ್. ಗಿರೀಶ್, ದೊಡ್ಡಬಳ್ಳಾಪುರದ ಬಾಶೆಟ್ಟಿ ಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ಆರ್.ನಾರಾಯಣಸ್ವಾಮಿ, ಬೆಂಗಳೂರಿನ ಸಂಜಯನಗರದ ಡೆಫೊಡಿಲ್ಸ್ ಐ.ಸಿ.ಎಸ್.ಇ. ಇಂಗ್ಲಿಷ್ ಮಾಧ್ಯಮ ಶಾಲೆಯ ಎಚ್.ಕೆ.ನರಸಿಂಹಮೂರ್ತಿ, ಮಲ್ಲಸಂದ್ರದ ಕಮ್ಮಗೊಂಡನಹಳ್ಳಿಯ ಪಿ.ಎಂ.ಶ್ರೀ. ಕೇಂದ್ರೀಯ ವಿದ್ಯಾಲಯದ ಅಶೋಕ್ ಸೇನ್ ಗುಪ್ತ ಅವರಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಸೆಪ್ಟೆಂಬರ್ 5 ರಂದು, ದಿಲ್ಲಿಯ ವಿಜ್ಞಾನ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪ್ರಶಸ್ತಿ 50 ಸಾವಿರ ರೂಪಾಯಿ ಹಾಗೂ ಬೆಳ್ಳಿ ಪದಕ ಒಳಗೊಂಡಿದೆ. ದೇಶಾದ್ಯಂತ ಒಟ್ಟು 50 ಶಿಕ್ಷಕರಿಗೆ ಈ ಬಾರಿ ಪ್ರಶಸ್ತಿ ಘೋಷಿಸಲಾಗಿದೆ.

<><><>

**ರಾಜ್ಯದಲ್ಲಿ ಆರೂವರೆ ಲಕ್ಷ ವಿದ್ಯಾರ್ಥಿಗಳು,** ರಾಷ್ಟ್ರೀಯ ಸೇವಾ ಯೋಜನೆ ಎನ್. ಎಸ್.ಎಸ್. ಮೂಲಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಯುವಜನೋತ್ಸವಗಳಲ್ಲಿ ಭಾಗವಹಿಸಿ, ಭ್ರಾತೃತ್ವಭಾವ ಮತ್ತು ದೇಶದ ಬಹುತ್ವ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು, ಎನ್.ಎಸ್.ಎಸ್. ಕೋಶದ ರಾಜ್ಯಾಧಿಕಾರಿ ಡಾಕ್ಟರ್ ಪ್ರತಾಪಲಿಂಗಯ್ಯ ಹೇಳಿದ್ದಾರೆ.

ಬಳ್ಳಾರಿಯ ವಿಜಯನಗರ ಶ್ರೀಕೃ ಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿರುವ, ರಾಜ್ಯ ಮಟ್ಟದ ಯುವ ಜನೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕುಲಪತಿ ಪ್ರೊಫೆಸರ್ ಎಂ.ಮುನಿರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಡೂರಿನ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ, ಅಂತಾರಾಷ್ಟ್ರೀಯ ಕ್ರೀಡಾ ಅಕಾದೆಮಿ ಅರಂಭಿಸುವ ಚಿಂತನೆ ಇದೆ, ಎಂದರು.

ಐದು ದಿನಗಳ ಈ ಯುವಜನೋತ್ಸವದಲ್ಲಿ, ರಾಜ್ಯದ 21 ವಿಶ್ವವಿದ್ಯಾಲಯಗಳಿಂದ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಕೆರೆಗಳಲ್ಲಿ,** ಫ್ಲೋಟಿಂಗ್ ಸೋಲಾರ್ ಪ್ಯಾನಲ್ ಅಳವಡಿಸುವ ಮಹತ್ವದ ಯೋಜನೆ ಮೂಲಕ, ಏತ ನೀರಾವರಿ ಯೋಜನೆಗಳಿಗೆ ಭರಿಸಲಾಗುತ್ತಿರುವ ವಿದ್ಯುತ್ ವೆಚ್ಚವನ್ನು ಕಡಿತಗೊಳಿಸುವುದು, ತಮ್ಮ ಆದ್ಯತೆಯಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್.ಬೋಸರಾಜು ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಈ ವಿಷಯ ಪ್ರಕಟಿಸಿರುವ ಅವರು, ಸಣ್ಣ ನೀರಾವರಿ ಇಲಾಖೆಯ ಸುಪರ್ದಿಯಲ್ಲಿರುವ, 100 ಎಕರೆಗೂ ಹೆಚ್ಚು ವ್ಯಾಪ್ತಿಯನ್ನು ಹೊಂದಿರುವ, 40 ಕೆರೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ತೇಲುವ ಸೌರ ವಿದ್ಯುತ್ ಫಲಕ ಅಳವಡಿಸಿ, 2 ಸಾವಿರದ 500 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಬಹುದಾಗಿದೆ. ವಿದ್ಯುತ್ ಉತ್ಪಾದನೆ ಹಾಗೂ ಕೆರೆಯ

ಪರಿಸರದ ಮೇಲೆ ಆಗುವ ಪರಿಣಾಮ, ಹೀಗೆ ಎಲ್ಲ ದೃಷ್ಟಿಕೋನದಿಂದ ಮಾಹಿತಿ ಸಂಗ್ರಹಿಸಲು, ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಸಚಿವರು ಮಾಹಿತಿ ನೀಡಿದ್ದಾರೆ.

<><><>

**ಅಮೆರಿಕದ ವರ್ಜೀನಿಯಾ ರಿಚ್ಮಂಡ್‌ನಲ್ಲಿ,** 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಬರುವ 30 ರಿಂದ ಸೆಪ್ಟೆಂಬರ್ 1 ನೇ ತಾರೀಖಿನ ವರೆಗೆ, ಜರುಗಲಿದೆ.

ವಿಧಾನ ಪರಿ ತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು, ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕನ್ನಡ ನಾಡು, ನುಡಿ, ಭಾ ೆ ಬೆಳವಣಿಗೆ, ಕನ್ನಡದ ಅಸ್ಮಿತೆ ಕುರಿತು ಬಸವರಾಜ ಹೊರಟ್ಟಿ ಅವರು, ತಮ್ಮ ನಾಲ್ಕು ದಶಕಗಳ ಅನುಭವ ಹಂಚಿಕೊಳ್ಳಲಿದ್ದಾರೆ.

ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ. ಯಿಂದ, ದಕ್ಷಿಣಾಭಿಮುಖವಾಗಿ ಸುಮಾರು, 110 ಮೈಲು ದೂರದಲ್ಲಿರುವ, ವರ್ಜೀನಿಯಾ ರಾಜ್ಯದ ರಾಜಧಾನಿ ರಿಚ್ಮಂಡ್ ನಗರದಲ್ಲಿ ನಡೆಯಲಿರುವ, ಅಕ್ಕ ಸಮ್ಮೇಳನದಲ್ಲಿ 5 ಸಾವಿರಕ್ಕೂ ಹೆಚ್ಚು ಕನ್ನಡಿಗರು, ಒಂದೇ ಸೂರಿನಡಿ ಸೇರಲಿದ್ದಾರೆ.

<><><>

**ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ,** ಉಡುಪಿಯ ಕೃಷ್ಣ ಮಠದಲ್ಲಿ ವಿಟ್ಲಪಿಂಡಿ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮಹಾಪೂಜೆಗೂ ಮುನ್ನ, ಗರ್ಭಗುಡಿಯಲ್ಲಿ ಕೃಷ್ಣನ ಮೃಣ್ಮಯ ಮೂರ್ತಿಗೆ ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಷೋಡಷೋಪಚಾರ ಪೂಜೆ ನೆರವೇರಿಸಿದರು.

ಬಳಿಕ ಮಣ್ಣಿನ ಉತ್ಸವ ಮೂರ್ತಿಯನ್ನು, ಚಿನ್ನದ ಪಲ್ಲಕ್ಕಿಯಲ್ಲಿ ಕೂರಿಸಿ, ರಥ ಬೀದಿಗೆ ತರಲಾಯಿತು. ಮೆರವಣಿಗೆಯ ಬಳಿಕ ಮೃಣ್ಮಯ ಮೂರ್ತಿಯನ್ನು ಮಧ್ವ ಸರೋವರದಲ್ಲಿ ವಿಸರ್ಜಿಸಲಾಯಿತು.

ಸಂಜೆ ರಾಜಾಂಗಣದಲ್ಲಿ ಹುಲಿವೇಷಧಾರಿಗಳ ಕುಣಿತದ ಪ್ರದರ್ಶನ ನಡೆಯಿತು.

<><><>

**ದಾಳಿಂಬೆ ಕ್ಲಸ್ಟರ್ ಅಭಿವೃದ್ಧಿ ಯೋಜನೆ ಅಡಿ,** ಕೇಂದ್ರ ಸರ್ಕಾರ, ಮುಂದಿನ ಐದು ವ ್ಗಗಳಲ್ಲಿ, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ, 3 ಸಾವಿರ ಎಕರೆ ಪ್ರದೇಶದಲ್ಲಿ, ದಾಳಿಂಬೆ ಬೆಳೆಸುವ ಗುರಿ ಹೊಂದಲಾಗಿದೆ ಎಂದು, ಜಿಲ್ಲೆಯ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಪಿ.ಜಿ. ಚಿದಾನಂದಪ್ಪ ತಿಳಿಸಿದ್ದಾರೆ.

ಹೊಸಪೇಟೆಯಲ್ಲಿ ಅವರು, ಸುದ್ದಿಗೋಷ್ಠಿ ನಡೆಸಿದರು.

<><><>

**ಚಿದಾನಂದಪ್ಪ ಧ್ವನಿ 45 ಸೆಕೆಂದುಗಳು**

<><><>

**ರಾಜ್ಯದ ಕರಾವಳಿ ತೀರದಲ್ಲಿ,** ಈ ತಿಂಗಳ 31 ರ ವರೆಗೆ, ಗಾಳಿಯ ವೇಗ ಪ್ರತಿ ಗಂಟೆಗೆ, 55 ಕಿಲೋ ಮೀಟರ್ ತಲುಪುವ ಸಾಧ್ಯತೆಯಿದ್ದು, ಸಮುದ್ರದಲ್ಲಿ ದೊಡ್ಡ ಅಲೆಗಳು ಏಳುವ ಸಂಭವವಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ಮುನ್ನೆಚ್ಚರಿಕೆ ನೀಡಿದೆ.

ದಕ್ಷಿಣಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಯ ಸಮುದ್ರ ತೀರಗಳಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಅಪಘಾತ ವಲಯಗಳ ಸಮೀಪದಲ್ಲೇ,** ಟ್ರಾಮಾ ಕೇರ್ ಸೆಂಟರ್‌ಗಳನ್ನು ತೆರೆಯಲು ಕ್ರಮ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ರಾಜ್ಯದ ಮಹಿಳಾ ವೈದ್ಯರ ಸುರಕ್ಷತೆ ಖಾತ್ರಿಗೆ,** ವ್ಯಾಪಕ ಮುಂಜಾಗ್ರತಾ ಕ್ರಮ – ಶರಣಪ್ರಕಾಶ ಪಾಟೀಲ.
- **ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ 40 ಕೆರೆಗಳಲ್ಲಿ,** ತೇಲುವ ಸೌರ ಫಲಕ ಅಳವಡಿಸಲು, ಅಧ್ಯಯನ – ಎನ್.ಎಸ್.ಬೋಸರಾಜು.
- **ಅಮೆರಿಕದ ರಿಚ್ಮಂಡ್‌ನಲ್ಲಿ,** ಇದೇ 30 ರಿಂದ ಮೂರು ದಿನಗಳ, 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>